ಮೂಲ ದಾವಾ ಸಂಖ್ಯೆ 48/2016

ಪಿಡಬ್ಲ್ಯೂ -1

**<u>ದಿನಾಂಕ 04.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-</u>**

ಸರ್ವೆ ನಂಬರ 35 ಒಟ್ಟು ಎಷ್ಟು ಎಕರೆ ಇದೆ ಎಂದರೆ 50 ಎಕರೆ 83 ಸೆಂಟ್ಸ ಇದೆ ಎನ್ನುತ್ತಾರೆ. ಸದರಿ 50 ಎಕರೆ 83 ಸೆಂಟ್ಸ ನಲ್ಲಿ 44 ಎಕರೆ 89 ಸೆಂಟ್ಸ ಗುಡ್ಡ ಪರಂಪೋಕ್ ಜಮೀನು ಆಗಿರುತ್ತದೆ ಎಂದರೆ ಸರಿ. ಸದರಿ 44 ಎಕರೆ 89 ಸೆಂಟ್ಸ ಸರ್ಕಾರಕ್ಕೆ ಸೇರಿದ್ದ ಜಮೀನು ಎಂದರೆ ಸರಿ. ಸದರಿ 44 ಎಕರೆ 89 ಸೆಂಟ್ಸ ಜಮೀನು ಕಲ್ಲು ಬಂಡೆ ಇದೆ ಎಂದರೆ ಸರಿಯಲ್ಲ. 7 ಎಕರೆಗೆ ಹೊಲ ಇದೆ ಎನ್ನುತ್ತಾರೆ. ಸದರಿ 44 ಎಕರೆ 89 ಸೆಂಟ್ಸಗೆ ಜಮೀನಿಗೆ ಸಂಬಂಧಪಟ್ಟಂತೆ ನಿಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿ. ಸದರಿ 44 ಎಕರೆ 89 ಸೆಂಟ್ಸ ಜಮೀನಿನಲ್ಲಿ ಕಲ್ಲು ಬಂಡೆ ಇರುವ ಕಾರಣ ಯಾರೂ ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. 44 ಎಕರೆ 89 ಸೆಂಟ್ಸ ನಲ್ಲಿ ನೀವೇನಾದರು ನಿಮ್ಮ ಮುಖ್ಯ ವಿಚಾರಣೆಯಲ್ಲಿ ವ್ಯವಸಾಯ ಮಾಡುತ್ತೇವೆಂದು ಬರೆಸಿದ್ದೀರಾ ಎಂದರೆ ಬರೆಸಿರುತ್ತೇನೆ ಎನ್ನುತ್ತಾರೆ. ಸದರಿ 44 ಎಕರೆ 89 ಸೆಂಟ್ಸ ಜಮೀನಿನಲ್ಲಿ ಯಾರೂ ಕೂಡ ವ್ಯವಸಾಯ ಮಾಡುವುದಿಲ್ಲಾ ಎಂದರೆ ಕೆಲವರು ಮಾಡುತ್ತಾರೆ ಕೆಲಸವರು ಮಾಡುತ್ತಿಲ್ಲಾ ಎನ್ನುತ್ತಾರೆ. ಯಾರು ಯಾರು ವ್ಯವಸಾಯ ಮಾಡುತ್ತಾರೆ ಅವರ ಹೆಸರು ಹೇಳಲು ಆಗುತ್ತದೆಯಾ ಎಂದರೆ ಬಸಾಪುರ ಖಾಸಿಂ ಸಾಬ್, ತಿಮ್ಮಪ್ಪ, ವೆಂಕಟೇಶ್, ಮಲ್ಲಪ್ಪ ಇವರೆಲ್ಲರೂ ವ್ಯವಸಾಯ ಮಾಡುತ್ತಾರೆ. ಸದರಿ ವಿಚಾರವನ್ನು ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲಾ ಎಂದರೆ ಸರಿ. ದಿನಾಂಕ 01.09.2014 ರಂದು ಗಣಿ ಇಲಾಖೆಯವರು ಬಂದು ಸ್ಥಳ ತನಿಖೆಯನ್ನು ಮಾಡಿದ್ದಾರೆ ಎಂದರೆ ಮಾಡಿರುವುದಿಲ್ಲಾ ಎನ್ನುತ್ತಾರೆ. ಸದರಿ ಗಣಿ

ಇಲಾಖೆಯವರು 44 ಎಕರೆ 89 ಸೆಂಟ್ಸ ಜಮೀನು ಕಲ್ಲು ಬಂಡೆ ಇರುವ ಜಮೀನು ಎನ್ನುವ ಬಗ್ಗೆ ವರದಿಯನ್ನು ಸಹ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ಇವರೂ ಕೂಡ ಸ್ಥಳವನ್ನು ನೋಡಿ ಪರಿಶೀಲಿಸಿ ಅಲ್ಲಿ ಯಾವುದೇ ಅಡವಿ ಇಲ್ಲಾ ಎನ್ನುವ ಬಗ್ಗೆ ವರದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 ರವರಿಗೆ ಗಣಿ ಇಲಾಖೆಯವರು ಪರವಾನಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ 44 ಎಕರೆ 89 ಸೆಂಟ್ಸ ಜಮೀನಿನ ಪೈಕಿ ಪ್ರತಿವಾದಿ 7 ರಿಂದ 9 ರವರಿಗೆ ತಲಾ 1 ಎಕರೆ 20 ಸೆಂಟ್ಸ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಎಷ್ಟು ಅಳತೆಯ ಜಮೀನು ಕೊಟ್ಟಿದ್ದಾರೆಂದು ಗೊತ್ತಿಲ್ಲಾ ಎನ್ನುತ್ತಾರೆ. ಗಣಿಗೆ ಸಂಬಂಧಪಟ್ಟಂತೆ ಲೀಜ್ ಅಗ್ರಿಮೆಂಟ್ ಕೂಡ ಆಗಿದೆ ಅದು ನೋಂದಣಿ ಆಗಿದೆ ಎಂದರೆ ಸುಳ್ಳು ಎನ್ನುತ್ತಾರೆ. ಸರ್ಕಾರಕ್ಕೆ ಸಂಬಂಧಪಟ್ಟ ತೆರಿಗೆಯನ್ನು ಕೂಡ 7 ರಿಂದ 9 ನೇ ಪ್ರತಿವಾದಿಗಳು ತುಂಬಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ಸರ್ಕಾರದವರು ಕೊಟ್ಟ ಪರವಾನಿಗೆಯ ಆಧಾರದ ಮೇಲೆ 7 ರಿಂದ 9 ನೇ ಪ್ರತಿವಾದಿಗಳು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಕ್ವಾರಿ ಕೆಲಸಕ್ಕೆ ಪರವಾನಿಗೆಯನ್ನು ನೀಡುವ ಮುಂಚಿತವಾಗಿ ಸಾರ್ವಜನಿಕರಿಂದ ತಕರಾರು ಅರ್ಜಿಗಳನ್ನು ಕರೆದಿದ್ದರು ಎಂದರೆ ಕರೆದಿರುವುದಿಲ್ಲಾ ಎನ್ನುತ್ತಾರೆ. ತಕರಾರು ಅರ್ಜಿಗಳನ್ನು ಕರೆದಿದ್ದರೂ ಸಹ ಕರೆದಿರುವುದಿಲ್ಲಾ ಎಂದು ಸಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮಗೆ 44 ಎಕರೆ 89 ಸೆಂಟ್ಸಗೆ ಸಂಬಂಧಪಟ್ಟಂತೆ ಯಾವುದೇ ಹಕ್ಕು ಅಧಿಕಾರ ಇಲ್ಲಾ ಎಂದರೆ ಸರಿ. ಪ್ರತಿವಾದಿ 7 ರಿಂದ 9 ರವರು ಕೆಲಸ ಮಾಡುತ್ತಿರುವ ಜಮೀನುಗಳಿಗೂ ನಿಮಗೂ ಯಾವುದೇ ಸಂಬಧ ಇಲ್ಲಾ ಎಂದರೆ ಸರಿಯಲ್ಲ. ನೀವು ದಾವೆ ಹಾಕಿರುವ ಜಮೀನಿನ ಚೆಕ್ ಬಂದಿ ಏನು ಇದೆ ಎಂದರೆ

ಪೂರ್ವಕ್ಕೆ ಪಲ್ಲಗಟ್ಟಿ ಚಮನ್ ಸಾಬ್ ರವರ ಜಮೀನು ಇದೆ, ಸದರಿ ಚಮನ್ ಸಾಬ್ ರವರ ಜಮೀನಿನ ಸರ್ವೆ ನಂಬರ ಎಷ್ಟು ಎಂದರೆ 36 ಇರಬಹುದು ಎನ್ನುತ್ತಾರೆ. ಪಶ್ಚಿಮಕ್ಕೆ ಬಸ್ಸಾಪುರ ಖಾಸಿಂಸಾಬ್ ರವರ ಹೊಲ ಇದೆ, ಸದರಿ ಖಾಸಿಂ ಸಾಬ್ ರವರ ಜಮೀನಿನ ಸರ್ವೆ ನಂಬರ ಗೊತ್ತಿಲ್ಲಾ. ಉತ್ತರಕ್ಕೆ ಕನ್ನಮ್ಮರ ನಿಂಗಪ್ಪನವರ ಜಮೀನು. ಕನ್ನಮ್ಮರ ನಿಂಗಪ್ಪ ನವರ ಸರ್ವೆ ನಂಬರ ಗೊತ್ತಿಲ್ಲಾ. ದಕ್ಷಿಣಕ್ಕೆ ನನ್ನದೇ ಹೊಲ ಎನ್ನುತ್ತಾರೆ. ನನ್ನ ಹೊಲದ ಸರ್ವೆ ನಂಬರ 11 ಎನ್ನುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಕಾಶೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ನಿಮ್ಮ ಜಮೀನಿನ ಚೆಕ್ ಬಂದಿಯಲ್ಲಿ ಹೇಳಿದ ವ್ಯಕ್ತಿಗಳಿಗೆ ಯಾವುದೇ ತೊಂದರೆ ಆಗಿದೆಯಾ ಎಂದರೆ ಇಲ್ಲಾ ಎನ್ನುತ್ತಾರೆ. ಪ್ರತಿವಾದಿ 7 ರಿಂದ 9 ರವರು ಕ್ವಾರಿ ಕೆಲಸ ಮಾಡುವ ಸಂಬಂಧ ಅಕ್ಕ ಪಕ್ಕದ ಜಮೀನಿನ ಬೇರೆ ಯಾವುದೇ ವ್ಯಕ್ತಿಗಳಿಗೂ ತೊಂದರೆ ಇಲ್ಲದಿದ್ದರೂ ಸಹ ದಾವೆಯನ್ನು ಹಾಕಿದ್ದೀರಾ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 ರವರು ಕಾನೂನು ಬದ್ಧವಾಗಿ ಪರವಾನಿಗೆಯನ್ನು ಪಡೆದು ಕೆಲಸ ಮಾಡುತ್ತಿದ್ದರೂ ಕೂಡ ಅವರಿಗೆ ತೊಂದರೆ ಕೊಡುವ ಉದ್ದೇಶ ದಿಂದ ಈ ದಾವೆಯನ್ನು ಹೂಡಿದ್ದೀರಾ ಎಂದರೆ ಸರಿಯಲ್ಲ. ನೀವು ನಿಮ್ಮ ಜಮೀನನ್ನು ಅಳತೆ ಮಾಡಲು ಅರ್ಜಿ ಕೊಟ್ಟಿದ್ದೆನು ಎಂದು ಹೇಳುತ್ತೀರಲ್ಲಾ ಯಾರಿಗೆ ಕೊಟ್ಟಿದ್ರಿ ಎಂದರೆ 2007 ನೇ ಇಸ್ವಿಯಲ್ಲಿ ತಹಶೀಲ್ದಾರ ರವರಿಗೆ ಕೊಟ್ಟಿದ್ದೇನು ಎನ್ನುತ್ತಾರೆ. ತಹಶೀಲ್ದಾರ ಏನಾದರು ಸರ್ವೆ ಮಾಡಿಸಿದ್ರಾ ಎಂದರೆ ಇಲ್ಲಾ ಹಾಗಾಗಿ ನಾನು ಈ ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ. ನೀವೇನಾದರು ತಹಶೀಲ್ದಾರ ರವರು ಸರ್ವೆ ಮಾಡದೇ ಇದ್ದಾಗ ಅವರ ಆದೇಶದ ವಿರುದ್ಧ ಉಪ ವಿಭಾಗಧಿಕಾರಿಗಳಿಗೆ ಅರ್ಜಿಯನ್ನು ಏನಾದರು ಕೊಟ್ಟಿದ್ದೀರಾ ಎಂದರೆ ಕೊಟ್ಟಿರುತ್ತೇನೆ

ಎನ್ನುತ್ತಾರೆ. ಆದರೆ ಉಪ ವಿಭಾಗಧಿಕಾರಿಗಳೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆ ಸಂಬಂಧ ನೀವೇನಾದರು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. ನೀವು ಸರ್ವೆ ಮಾಡುವ ಸಂಬಂಧ ಎ ಡಿ ಎಲ್ ಆರ್ ಮತ್ತು ಡಿ ಡಿ ಎಲ್ ಆರ್ ರವರಿಗೆ ಸಂಬಂಧಪಟ್ಟಿದ್ದರೂ ಕೂಡ ಪ್ರತಿವಾದಿ 7 ರಿಂದ 9 ರವರಿಗೆ ತೊಂದರೆ ಕೊಡುವ ಉದ್ದೇಶ ದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೀರಾ ಎಂದರೆ ಸರಿಯಲ್ಲ. ನೀವು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿ 1 ರಿಂದ 6 ರವರಿಗೆ ನೋಟೀಸನ್ನು ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. ಯಾವ ತಾರೀಖಿನಂದು ಕೊಟ್ಟಿದ್ದೀರಾ ಎಂದರೆ ದಿನಾಂಕ ನೆನಪು ಇಲ್ಲಾ ಎನ್ನುತ್ತಾರೆ. ನೋಟೀಸಿನಲ್ಲಿ ಏನು ಪರಿಹಾರ ಕೇಳಿ ಕೊಟ್ಟಿದ್ದೀರಾ ಎಂದರೆ ಅಕ್ರಮವಾಗಿ ನಮ್ಮ ಜಮೀನಿನ ಸುತ್ತಾ ಮುತ್ತ ಅಕ್ರಮಗಣಿಗಾರಿಕೆ ಮಾಡುತ್ತಿದ್ದಾರೆಂದು ಕೊಟ್ಟಿದ್ದೇನೆ ಎನ್ನುತ್ತಾರೆ. ಅಕ್ರಮವಾಗಿ ಗಣಿಗಾರಿಕೆ ಮಾಡಿದರೆ ಕ್ರಿಮಿನಲ್ ಪ್ರಕರಣ ಆಗುತ್ತದೆ ಎಂದರೆ ಸರಿ. ಅದಕ್ಕೇನಾದರು ನೀವು ಪೋಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಕೊಟ್ಟಿದ್ದೇನೆ ಎನ್ನುತ್ತಾರೆ. 7 ರಿಂದ 9 ರ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**(13 ಮತ್ತು 14 ನೇ ಪರ ವಕೀಲರಾದ ಕೆ ಬಿ ಆರ್ ರವರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ